ಕೆಲಸವನ್ನು ಮಾಡಿಲ್ಲ. ಇದು ಒಂದು ಸ್ವಲ್ಪಮಟ್ಟಿಗೆ ಹಣ ಖರ್ಚಾಗದೇ ಇರತಕ್ಕಂಥದ್ದಕ್ಕೆ ಕಾರಣವಾಗಿದೆ. ಆದರೆ 31-03-95ನೇ ತಾರೀಖು 111 ಲಕ್ಷ ರೂ.ಗಳನ್ನು ಈಗಾಗಲೇ ಬಿಡುಗಡೆ ಮಾಡಿದ್ದೇವೆ. ಇದು ಏನೂ ಲ್ಯಾಪ್ಸ್ ಆಗುವಂಥ ಹಣವಲ್ಲ. 'ಉದ್ಯೋಗ ದೃಢೀಕರಣ ಯೋಜನೆ' ಭರವಸೆ ಯೋಜನೆ ಕೆಳಗಡೆ, 94-95 ಆದಮೇಲೆ 1995-96ನೇ ಸಾಲಿನಲ್ಲೂ ಕೂಡ ಈ ಯೋಜನೆಯನ್ನು ಮುಂದುವರಿಸಿಕೊಂಡು ಹೋಗುವುದರಿಂದ ಮಾನ್ಯ ಸದಸ್ಯರು ಯಾವ ಆತಂಕವನ್ನು ಪಡಬೇಕಾದಂಥ ಅಗತ್ಯವಿಲ್ಲ ಮತ್ತು ಆ ನಿಯಮಾವಳಿಗನುಸಾರವಾಗಿ ಯಾರು ಯಾರು ಉದ್ಯೋಗವನ್ನು ಬಯಸುತ್ತಾರೋ ಆಯಾಯ ಬ್ಲಾಕ್‌ನಲ್ಲಿ ಅಥವಾ ಪಂಚಾಯತಿ ವ್ಯಾಪ್ತಿಯಲ್ಲಿ ಅವರಿಗೆ ಉದ್ಯೋಗವನ್ನು ಕೊಟ್ಟೇ ತೀರಬೇಕು ಎನ್ನುವುದು ಈ ಯೋಜನೆಯ ಮುಖ್ಯ ಗುರಿ.

ವಿರಾಜಪೇಟೆ ತಾಲ್ಲೂಕಿನಲ್ಲಿ ಲೋಕೋಪಯೋಗಿ ಇಲಾಖೆ ರಸ್ತೆಗಳ ದುರಸ್ತಿ

923ಎ - ಶ್ರೀ ಹೆಚ್.ಡಿ. ಬಸವರಾಜು (ವಿರಾಜಪೇಟೆ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿರಾಜಪೇಟೆ ತಾಲ್ಲೂಕಿನ ಬಹುಪಾಲು ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳು ಬಹಳ ವರ್ಷಗಳಿಂದ ದುರಸ್ತಿ ಕಾಣದೆ ಈ ರಸ್ತೆಗಳಲ್ಲಿ ಪ್ರಯಾಣಿಸುವುದು ಅಪಾಯಕಾರಿ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ರಸ್ತೆಗಳನ್ನು ದುರಸ್ತಿಗೊಳಿಸಲು ಸರ್ಕಾರದವರು ಕೈಗೊಂಡಿರುವ ಕ್ರಮವೇನು ಹಾಗೂ ಎಷ್ಟು ಹಣ ಖರ್ಚು ಮಾಡಲಿದೆ ವಿವರ ತಿಳಿಸುವುದು?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು):

ಅ) ವೀರಾಜಪೇಟೆ ತಾಲ್ಲೂಕಿನಲ್ಲಿ ಕಳೆದ ಸಾಲಿನಲ್ಲಿ ಸತತವಾಗಿ ಬಿದ್ದ ಭಾರೀ ಮಳೆಯಿಂದಾಗಿ ಹಾಗೂ ಹೆಚ್ಚಿನ ಭಾರದ ವಾಹನ ಸಂಚಾರದಿಂದಾಗಿ ಹಲವಾರು ರಸ್ತೆಗಳು ಕೆಟ್ಟಿದ್ದುದು ಸರ್ಕಾರದ ಗಮನಕ್ಕೆ ಬಂದಿದೆ. ಈಗಾಗಲೇ ಸದರಿ ರಸ್ತೆಗಳಿಗೆ ಡಾಂಬರು ಪ್ಯಾಚಿಂಗ್ ಕಾರ್ಯ ಕೈಗೊಂಡು ವಾಹನ ಸಂಚಾರಕ್ಕೆ ಯೋಗ್ಯವಾಗಿಡಲಾಗಿದೆಯಾದ್ದರಿಂದ ಇವುಗಳಲ್ಲಿ ಪ್ರಯಾಣಿಸುವುದು ಅಪಾಯಕಾರಿಯಲ್ಲ.

ಆ) ಕೆಟ್ಟು ಹೋದ ರಸ್ತೆಯ ಭಾಗಗಳಿಗೆ ಈಗಾಗಲೇ ಡಾಂಬರು ಪ್ಯಾಚಿಂಗ್ ಕಾರ್ಯಕೈಗೊಂಡು ವಾಹನ ಸಂಚಾರಕ್ಕೆ ಯೋಗ್ಯವಾಗಿಡಲಾಗಿದೆ. ಅಲ್ಲದೇ ಅತೀ ಹಾಳಾದ ಭಾಗಗಳಿಗೆ ನವೀಕರಣ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಂಡು ಪ್ರಗತಿಯಲ್ಲಿದೆ. ವಿವರ ಕೆಳಕಂಡಂತಿದೆ :

(ಲಕ್ಷ ರೂ.ಗಳಲ್ಲಿ)

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ	ಬಿಡುಗಡೆಯಾದ ಅನುದಾನ
1.	5054 ರಸ್ತೆ ಮತ್ತು ಸೇತುವೆಗಳು - 52 ಇತರ ರಸ್ತೆಗಳ ನಿರ್ಮಾಣ ಯೋಜನೆ	3.00
2.	-"- ಕ್ಷೇತ್ರಾವಾರು ಕಾರ್ಯಕ್ರಮ	10.00
3.	-"- ಉನ್ನತೀಕರಣಗೊಂಡ ರಸ್ತೆಗಳು	3.00
		16.00

4.	2515 ಗಡಿ ಪ್ರದೇಶಾಭಿವೃದ್ಧಿ ಯೋಜನೆ	4.60
5.	8000 - ಗ್ರಾಮೀಣ ಉದ್ಯೋಗ ಅಭಿವೃದ್ಧಿ ಯೋಜನೆ	7.00
6.	3054 ರಸ್ತೆ ಮತ್ತು ಸೇತುವೆಗಳು - ಯೋಜನೇತರ	55.55
7.	3054 ರಸ್ತೆ ಮತ್ತು ಸೇತುವೆಗಳು - ಗಿರಿ ಪ್ರದೇಶಾಭಿವೃದ್ಧಿ ಯೋಜನೇತರ	53.00
8.	2245 ಪ್ರಕೃತಿ ವಿಕೋಪಗಳು ಪ್ರವಾಹ ಮಳೆ ಹಾನಿ ದುರಸ್ತಿ (ಯೋಜನೇತರ)	7.00
	ಒಟ್ಟು	143.15

ಶ್ರೀ ಹೆಚ್.ಡಿ. ಬಸವರಾಜ್ (ವೀರಾಜಪೇಟೆ) : ಮಾನ್ಯ ಸಭಾಧ್ಯಕ್ಷರೇ, ಅವರು ಕೊಟ್ಟಿರುವ ಉತ್ತರದಲ್ಲಿ ವೀರಾಜಪೇಟೆ ತಾಲ್ಲೂಕಿನಲ್ಲಿ ಕಳೆದ ಸಾಲಿನಲ್ಲಿ ಸತತವಾಗಿ ಬಿದ್ದ ಮಳೆ ಮತ್ತು ಭಾರಿ ವಾಹನಗಳ ಸಂಚಾರದಿಂದ ರಸ್ತೆಗಳು ಕೆಟ್ಟಿವೆ ಎಂದು ತಿಳಿಸಿರುತ್ತಾರೆ. ಆದರೆ ಆ ರೀತಿ ರಸ್ತೆಗಳು ಕೆಟ್ಟಿದ್ದರೆ ಸಂಪೂರ್ಣವಾಗಿ ಕೆಡಬೇಕಾಗಿತ್ತು. ಸುಮಾರು 29 ಕಿ.ಮೀ. ದೂರ ಇರುವಂಥ ವೀರಾಜಪೇಟೆ ಮತ್ತು ಮಾಕುಂದ ರಸ್ತೆ ಪ್ರಯಾಣಕ್ಕೆ ಒಂದೂವರೆ ಗಂಟೆಗೂ ಹೆಚ್ಚು ಕಾಲವನ್ನು ತೆಗೆದುಕೊಳ್ಳುತ್ತದೆ. ಸಂಬಂಧಪಟ್ಟ ಸಚಿವರು ಇದನ್ನು ಖುದ್ದಾಗಿ ಪರಿಶೀಲನೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ನನ್ನ ಎರಡನೆಯ ಉಪ ಪ್ರಶ್ನೆ ಎಂದರೆ, ಸುಮಾರು 143.15 ಲಕ್ಷ ರೂ.ಗಳನ್ನು ರಸ್ತೆ ರಿಪೇರಿಗೆ ಅನುದಾನವಾಗಿ ಬಿಡುಗಡೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಈ ಕೆಲಸವನ್ನು ಎಷ್ಟು ವರ್ಷಗಳಲ್ಲಿ ಅವರು ಮಾಡುತ್ತಾರೆ ಎಂಬುದನ್ನು ನನಗೆ ತಿಳಿಸಬೇಕು ಮತ್ತು ಯಾವ ಹಂತದಲ್ಲಿ ಇವರು ಮಾಡಬೇಕು ಎಂದು ಯೋಜನೆ ಹಾಕಿದ್ದಾರೆ? ಏಕೆಂದರೆ ಇನ್ನೆರಡು ತಿಂಗಳಿನಲ್ಲಿ ಮಳೆಗಾಲ ಬರುತ್ತದೆ. ಕೊಡಗಿನ ಮಳೆಯ ಬಗ್ಗೆ ತಮಗೆ ಚೆನ್ನಾಗಿ ಗೊತ್ತಿದೆ. ಆದುದರಿಂದ ಈ ಕೆಲಸವನ್ನು ಎಷ್ಟು ಸಮಯದಲ್ಲಿ ಮುಗಿಸುತ್ತೀರಿ?

ಶ್ರೀ ಶಿವಾನಂದ ಹೆಚ್. ಕೌಜಲಗಿ : ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶಾಸಕರು ಹೇಳಿದ ಪ್ರಕಾರ ಕೊಡಗಿನಲ್ಲಿ ಭಾರಿ ಮಳೆಯಿಂದ ರಸ್ತೆ ಹಾಳಾಗಿರುವುದು ನಿಜ. ಆ ರಸ್ತೆ ಹಾಳಾಗಿರುವುದನ್ನು ರಿಪೇರಿ ಮಾಡುವ ಸಲುವಾಗಿ ನಾವು ಇಲ್ಲಿಯವರೆಗೆ 143.15 ಲಕ್ಷ ರೂ.ಗಳನ್ನು ಈ ಕ್ಷೇತ್ರದ ಸಲುವಾಗಿ ಸರ್ಕಾರ ಬಿಡುಗಡೆ ಮಾಡಿದ್ದೇವೆ. ಅದರಲ್ಲಿ ಇಲ್ಲಿಯವರೆಗೆ 136.31 ಲಕ್ಷ ರೂ.ಗಳು ಖರ್ಚಾಗಿದೆ. ಇನ್ನು, ಅವರ ಸಲಹೆಯಂತೆ ಬೇರೆ ಬೇರೆ ಕಡೆಗೆ ಆಯ್ದ ಸ್ಥಳಗಳಲ್ಲಿ ಇವೊತ್ತು ನಾವು ಖರ್ಚು ಮಾಡಿದ್ದೇವೆ. ಇದರ ಬಗ್ಗೆ ಹೆಚ್ಚಿನ ಗಮನವನ್ನು ಕೊಟ್ಟು ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. ಅವರು ಈಗ ಹಣದ ವೆಚ್ಚ ಸರಿಯಾಗಿ ಆಗಿರುವುದಿಲ್ಲ ಎಂದು ಹೇಳಿರುತ್ತಾರೆ. ಅವರು ಈ ಬಗ್ಗೆ ನಿರ್ದಿಷ್ಟವಾದ ಆಪಾದನೆಯನ್ನು ಕೊಟ್ಟಲ್ಲಿ ಅದರ ಬಗ್ಗೆ ವಿಚಾರಣೆಯನ್ನು ನಾವು ಮಾಡುತ್ತೇವೆ.

ಶ್ರೀ ಹೆಚ್.ಡಿ. ಬಸವರಾಜ್ : ಮಾಕುಂದ - ವೀರಾಜಪೇಟೆ ಕೇವಲ 29 ಕಿ.ಮೀ. ಇದೆ. ಈ ರಸ್ತೆಯಲ್ಲಿ ಯಾವ ದುರಸ್ತಿ ಕಾರ್ಯವನ್ನು ಮಾಡಿರುವುದಿಲ್ಲ. ಯಾರು ಬೇಕಾದರೂ ಬರಲಿ ನಾನು ರಸ್ತೆ ದುರಸ್ತಿ ಕಾರ್ಯ ಆಗದೇ ಇರುವುದನ್ನು ತೋರಿಸುತ್ತೇನೆ. ಈಗಲೇ ಬೇಕಾದರೆ ನಾನು ಸಿದ್ಧನಿದ್ದೇನೆ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಈಗಾಗಲೇ ಆದ್ಯತೆ ಮೇಲೆ ಕೊಡಗಿನ ಎಲ್ಲಾ ರಸ್ತೆಗಳನ್ನು ದುರಸ್ತಿ ಮಾಡಲಿಕ್ಕೆ ಕ್ರಮವನ್ನು ನಾವು ತೆಗೆದುಕೊಂಡಿದ್ದೇವೆ. ಈ ಮೇಲಿನ ರಸ್ತೆ ದುರಸ್ತಿ ಕಾರ್ಯದಲ್ಲಿ ವಿಶೇಷ ಆದ್ಯತೆ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು.

(ಉತ್ತರಗಳನ್ನು ಲಗತ್ತಿಸಲಾಗಿದೆ)

ವಿಜಾಪುರ ಜಿಲ್ಲೆಯಲ್ಲಿ ಹೊಸ ಪಶುವೈದ್ಯಕೀಯ ಆಸ್ಪತ್ರೆಗಳು

851 - ಶ್ರೀ ಬಸವನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಪಶುಸಂಗೋಪನಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿರುವ ಪಶು ವೈದ್ಯಕೀಯ ಆಸ್ಪತ್ರೆಗಳೆಷ್ಟು?

ಆ) ಜಿಲ್ಲೆಯಲ್ಲಿ ಬೇಡಿಕೆ ಇರುವ ಆಸ್ಪತ್ರೆಗಳ ಸಂಖ್ಯೆ ಎಷ್ಟು?

ಇ) ಹೊಸ ಪಶುವೈದ್ಯಕೀಯ ಆಸ್ಪತ್ರೆಗಳನ್ನು ಸ್ಥಾಪಿಸುವ ಬಗ್ಗೆ ಸರ್ಕಾರದವರು ಪರಿಶೀಲಿಸುವರೇ?

ಶ್ರೀ ಬಿ.ಎನ್. ಬಚ್ಚೇಗೌಡ (ಪಶು ಸಂಗೋಪನಾ ರಾಜ್ಯ ಸಚಿವರು) :

ಅ) 175

ಆ) 12

ಇ) ಬಿಜಾಪುರ ಜಿಲ್ಲೆಯಲ್ಲಿ ಹಿಂದೆ ಜಿಲ್ಲಾ ಪಂಚಾಯತ್‌ನಿಂದ ಪ್ರಾರಂಭಿಸಲ್ಪಟ್ಟಿರುವ 20 ಪಶುಚಿಕಿತ್ಸಾ ಕೇಂದ್ರಗಳನ್ನು 1995-96ನೇ ಸಾಲಿನಲ್ಲಿ ಸಕ್ರಮಗೊಳಿಸಲು ನಿರ್ಧರಿಸಿದೆ. ಇದನ್ನು ಬಿಟ್ಟು ಹೊಸ ಆಸ್ಪತ್ರೆಗಳನ್ನು ಸರ್ಕಾರವು ಪ್ರಾರಂಭಿಸುವುದು ಪರಿಶೀಲಿಸಲಾಗುವುದು.

ಶ್ರೀ ಬಸವನಗೌಡ ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಜಿಲ್ಲೆಯಲ್ಲಿ ಬೇಡಿಕೆಯಿರುವಂಥ ಆಸ್ಪತ್ರೆಗಳ ಸಂಖ್ಯೆ 12 ಎಂದು ಹೇಳಿದ್ದಾರೆ. ಆದರೆ ಅವು ಯಾವುವು ಎಂಬುದನ್ನು ದಯವಿಟ್ಟು ತಿಳಿಸಬೇಕು. ಅದೇ ರೀತಿ ಪಶುವೈದ್ಯಕೀಯ ಆಸ್ಪತ್ರೆಗಳ ಪರಿಸ್ಥಿತಿ ಹೇಗಿದೆ ಎಂದರೆ, ರೈತರು ತಮ್ಮ ದನಕರುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋದಾಗ.....

ಅಧ್ಯಕ್ಷರು : ಹೊಸ ಆಸ್ಪತ್ರೆಗಳು ನಿಮ್ಮ ಕ್ಷೇತ್ರದಲ್ಲಿ ಬೇಕಾಗಿದೆ.

ಶ್ರೀ ಬಿ.ಎನ್. ಬಚ್ಚೇಗೌಡ : ಬಿಜಾಪುರ ಜಿಲ್ಲೆಯಲ್ಲಿ ಈಗ ಒಟ್ಟು 175 ಆಸ್ಪತ್ರೆಗಳು, ಜಾನುವಾರು ಚಿಕಿತ್ಸಾ ಕೇಂದ್ರಗಳು ಕೆಲಸ ಮಾಡುತ್ತಿವೆ. ಅಲ್ಲಿ ಒಟ್ಟು ಬೇಡಿಕೆ ಇರತಕ್ಕಂಥದ್ದು 188. ಜಿಲ್ಲಾ ಜಾನುವಾರು ಗಣತಿ ಪ್ರಕಾರ 187 ಪಶು ಚಿಕಿತ್ಸಾ ಕೇಂದ್ರಗಳು ಬೇಕು ಎಂದು ಹೇಳಿದ್ದಾರೆ. ಈಗ ಮೊನ್ನೆ ನಮ್ಮ ಆಯವ್ಯಯ ಪತ್ರದಲ್ಲಿ 1982-83 ರಿಂದ ಮಂಜೂರು ಆಗದೇ ಇದ್ದಂಥ ಸುಮಾರು 310 ಪ್ರಾಥಮಿಕ ಪಶು ಚಿಕಿತ್ಸಾಲಯಗಳನ್ನು ನಾವು ಮಂಜೂರು ಮಾಡಿದ್ದೇವೆ. ಅದರ ಪ್ರಕಾರ ಬಿಜಾಪುರ ಜಿಲ್ಲೆಯಲ್ಲಿ 175 ಮತ್ತು 20 ಒಟ್ಟು 195 ಆಸ್ಪತ್ರೆಗಳು ಆಗುತ್ತವೆ. ಈ ಅಂಕಿ ಸಂಖ್ಯೆಗಳು ಬೇಕು ಎಂದರೆ ಆ ಜಿಲ್ಲೆಯ ಅಂಕಿ ಸಂಖ್ಯೆಗಳು ನನ್ನ ಹತ್ತಿರ ಇದೆ. ಅದನ್ನು ಓದಿ ಎಂದರೆ ಓದುತ್ತೇನೆ. ಮತ್ತೆ ಈಗ ನಮ್ಮ ಕರ್ನಾಟಕದಲ್ಲಿ 3174 ಇನ್ಸ್‌ಟ್ಯೂಷನ್ಸ್‌ಗಳಿವೆ. ಅಂದರೆ ಇದು 27 ಸಾವಿರ ಹಳ್ಳಿಗಳಿಗೆ ಸಂಬಂಧಪಟ್ಟ ಅಂಕಿ ಸಂಖ್ಯೆ ಅಂದರೆ 5 ಸಾವಿರ ಕ್ಯಾಟಲ್ ಪ್ಯಾಪುಲೇಷನ್‌ಗೆ ಒಂದು ಪಶು ಚಿಕಿತ್ಸಾಲಯ. ಆ ಪ್ರಕಾರವಾಗಿ We have reached saturation. ನಮ್ಮ ನಾಗೇಗೌಡರು ಸಂಪೂರ್ಣವಾಗಿ ಕೊಟ್ಟುಬಿಟ್ಟಿದ್ದಾರೆ. ಹಿಂದೆ ಇದ್ದಂಥ ಸಚಿವರು ಎಲ್ಲದಕ್ಕೂ ಕೊಟ್ಟಿದ್ದಾರೆ. ಕೆಲವು ಕಡೆ ಹೆಚ್ಚು ಕೊಟ್ಟಿದ್ದಾರೆ, ಕೆಲವು ಕಡೆ ಬೇಡಿಕೆ ಇದೆ. ಈಗ ಹೊಸದಾಗಿ